No. ED/KEA/ CR-11/UGNEET /2026 Date: 23-09-2026

## 3RD ROUND ONLINE SEAT ALLOTMENT TO UG MEDICAL AND DENTAL COURSES – 2026

ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿದಿರುವ ವೈದ್ಯಕೀಯ ಮತ್ತು ದಂತವೈದ್ಯಕೀಯ ಸೀಟುಗಳ ವಿವರಗಳನ್ನು ದಿನಾಂಕ 17-09-2026 ರಂದು ಪ್ರಾಧಿಕಾರದ ವೆಬ್‌ಸೈಟನಲ್ಲಿ ಪ್ರಕಟಿಸಲಾಗಿದೆ ಹಾಗು ಈ ಸೀಟುಗಳನ್ನು ಮೂರನೇ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ. ಇದಲ್ಲದೆ ಎರಡನೇ ಸುತ್ತಿನ ನಂತರ ಅಭ್ಯರ್ಥಿಗಳು ರದ್ದು ಪಡಿಸಿಕೊಳ್ಳಬಹುದಾದ ಸೀಟುಗಳು, ಮುಟ್ಟುಗೋಲು ಹಾಕಿಕೊಳ್ಳುವ / ಸೀಟ್ ಮ್ಯಾಟ್ರಿಕ್ಸ್‌ಗೆ ಸೇರ್ಪಡೆಯಾಗುವ ಸೀಟುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟನಲ್ಲಿ ಪ್ರಕಟಿಸಲಾಗುವುದು ಮತ್ತು ಈ ಸೀಟುಗಳನ್ನೂ ಸಹ 3ನೇ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ. ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟನ್ನು ಆಗಿಂದಾಗ್ಗೆ ಪರಿಶೀಲಿಸುತ್ತಿರಲು ಸೂಚಿಸಿದೆ. ಸದರಿ ಸೀಟುಗಳನ್ನು ಪಡೆಯಲು ಆಸಕ್ತಿ ಇದ್ದಲ್ಲಿ ಅರ್ಹ ಅಭ್ಯರ್ಥಿಗಳು ಯುಜಿನೀಟ್ - 2026 ರ ವೈದ್ಯಕೀಯ ಮತ್ತು ದಂತವೈದ್ಯಕೀಯ 3ನೇ ಸುತ್ತಿನ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

### 1. ಮೂರನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ:

a) ಮೊದಲನೆ ಮತ್ತು ಎರಡನೇ ಸುತ್ತಿನಲ್ಲಿ ಯಾವುದೇ ವೈದ್ಯಕೀಯ / ದಂತವೈದ್ಯಕೀಯ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು.

b) ವೈದ್ಯಕೀಯ / ದಂತ ವೈದ್ಯಕೀಯ ಸೀಟು ಹಂಚಿಕೆಯ ನಂತರ ದಂಡ ಪಾವತಿಸುವ ಮೂಲಕ ರದ್ದು ಪಡಿಸಿಕೊಂಡಿರುವ ಅಭ್ಯರ್ಥಿಗಳು.

c) ವೈದ್ಯಕೀಯ / ದಂತವೈದ್ಯಕೀಯ ಸೀಟಿಗೆ ಈಗಾಗಲೇ ಪ್ರವೇಶವನ್ನು ಪಡೆದಿರುವ ಅಭ್ಯರ್ಥಿಗಳು ಸೀಟುಗಳನ್ನು Up-gradation ಮಾಡಿಕೊಳ್ಳಲು ಆಸಕ್ತಿ ಇದ್ದಲ್ಲಿ ಮೂರನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು. (ಇತ್ತೀಚಿನ ಮಾನ್ಯ ನ್ಯಾಯಾಲಯಗಳ ಆದೇಶಗಳ ಅನ್ವಯ)

### 2. ಮೂರನೇ ಸುತ್ತಿನಲ್ಲಿ ಭಾಗವಹಿಸಲು ಅನರ್ಹತೆ:

a) ಮೊದಲನೇ ಹಾಗೂ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆ ಮಾಡಿಕೊಂಡು ಯಾವುದೇ ಛಾಯ್ಸ್ ಗಳನ್ನು ಆಯ್ಕೆ ಮಾಡದಿರುವವರು 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.

b) ಮೊದಲನೇ ಹಾಗೂ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆ ಮಾಡಿಕೊಂಡು ಛಾಯ್ಸ್-4 ಆಯ್ಕೆ ಮಾಡಿರುವವರು 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.



18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

**3. ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳಿಗೆ CAUTION DEPOSIT ಪಾವತಿಸುವ ವಿವರ FROM 24-09-2026 TO 28-09-2026**

**(BANKING WORKING HOURS)**

| Interested in Medical seats for | PAY | Candidate gets the eligibility to enter options |
|---|---|---|
| 'G' Seats | Rs. 1,00,000/- | a. Allowed to enter only Medical 'G' Seat options; and<br>b. Allowed to enter 'G', 'P','N','Q' All type of Dental seats |
| 'P' Seats | Rs. 12,00,000/- | Allowed to enter 'G' and 'P' Medical Seat options and 'P' seats in Private University options. (Candidate has to pay the balance fee after announcement of results) |
| 'N' / 'Q' Seats | Rs. 25,00,000/- | Allowed to enter all type of medical seat options (Candidate has to pay the balance fee after announcement of results) |
| **Dental Caution Deposit** | | |
| **Interested in Dental seats** | Rs.1,00,000/- | Allowed to enter all type of seat options (Candidate has to pay the balance fee after announcement of results) |

a) ಮೇಲೆ ತಿಳಿಸಿರುವ ದಿನಾಂಕಗಳಲ್ಲಿ ಎಲ್ಲಾ ವರ್ಗದ ಅಭ್ಯರ್ಥಿಗಳು 3ನೇ ಸುತ್ತಿನಲ್ಲಿ ಭಾಗವಹಿಸಲು CAUTION **DEPOSIT** ಪಾವತಿಸಬೇಕು.

b) ವೈದ್ಯಕೀಯ / ದಂತವೈದ್ಯಕೀಯ ಸೀಟಿಗೆ ಈಗಾಗಲೇ ಪ್ರವೇಶವನ್ನು ಪಡೆದಿರುವ ಅಭ್ಯರ್ಥಿಗಳು CAUTION **DEPOSIT** ಪಾವತಿಸುವಂತಿಲ್ಲ.

c) ಇತರೆ ಕೋರ್ಸುಗಳಿಗೆ ಪಾವತಿಸಿರುವ ಶುಲ್ಕವನ್ನು CAUTION **DEPOSIT** ಎಂದು ಪರಿಗಣಿಸುವುದಿಲ್ಲ. ಅಂತಹ ಅಭ್ಯರ್ಥಿಗಳು ಪ್ರತ್ಯೇಕವಾಗಿ CAUTION **DEPOSIT** ಪಾವತಿಸಬೇಕು.

d) ಮೂರನೇ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟಿಗೆ CAUTION **DEPOSIT** ಹೊಂದಾಣಿಕೆ ಮಾಡಲಾಗುವುದು.

e) 3ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಅಭ್ಯರ್ಥಿಯು ಕಾಲೇಜಿಗೆ ಪ್ರವೇಶ ಪಡೆಯಲು ವಿಫಲನಾದಲ್ಲಿ ಅಥವಾ ರದ್ದುಗೊಳಿಸಲು ಇಚ್ಚಿಸಿದಲ್ಲಿ ಅಥವಾ ಕಾಲೇಜಿಗೆ ವರದಿ ಮಾಡಿಕೊಳ್ಳದಿದ್ದಲ್ಲಿ ಅಭ್ಯರ್ಥಿಯು ಪಾವತಿಸಿದ್ದ **CAUTION FEE DEPOSIT** ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (ನಿಯಮಾನುಸಾರ ದಂಡವನ್ನೂ ಪಾವತಿಸಬೇಕು – ಅಖಿಲ ಭಾರತ ಕೌನ್ಸಿಲಿಂಗ್ ಸೇರಿದಂತೆ ಮುಂದಿನ ವರ್ಷಗಳ ವೈದ್ಯಕೀಯ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ)

**4. OPTION ENTRY (From11.00 am on 25-09-2026 to 29-09-2026- 11.00 am)**

a) CAUTION **DEPOSIT** ಅನ್ನು ಪಾವತಿಸುವ ಎಲ್ಲಾ ಅಭ್ಯರ್ಥಿಗಳನ್ನು ವೈದ್ಯಕೀಯ / ದಂತವೈದ್ಯಕೀಯ ಸೀಟುಗಳಿಗೆ **OPTIONS** ಗಳನ್ನು ದಾಖಲಿಸಲು ಅನುವು ಮಾಡಿಕೊಡಲಾಗುವುದು.

b) ಎಲ್ಲಾ ಅಭ್ಯರ್ಥಿಗಳು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸಿಗೆ ಹೊಸದಾಗಿ **OPTIONS** ಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ **OPTIONS** ಗಳನ್ನು ಪರಿಗಣಿಸುವುದಿಲ್ಲ.

3

c) ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆಯ ನಂತರ ಸೀಟುಗಳು ರದ್ದುಗೊಳ್ಳಬಹುದಾದ ಅಥವಾ ಸೀಟ್ ಮ್ಯಾಟ್ರಿಕ್ಸ್‌ಗೆ ಸೇರಿಸಬಹುದಾದ ಸೀಟುಗಳನ್ನೂ ಸಹ ಹಂಚಿಕೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳನ್ನು ತೋರಿಸದಿದ್ದರೂ ಸಹ ಅಭ್ಯರ್ಥಿಗಳು ಕಾಲೇಜಿಗೆ ಸೇರಿಕೊಳ್ಳಲು ಆಸಕ್ತಿ ಇರುವ ಎಲ್ಲಾ **OPTIONS** ಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಸೂಚಿಸಲಾಗಿದೆ.

d) ಏಕೆಂದರೆ ಸೀಟು ಹಂಚಿಕೆಯ ಸಂದರ್ಭದಲ್ಲಿ ಉದ್ಭವಿಸುವ ಸೀಟುಗಳು ಹಂಚಿಕೆಗೆ ಪರಿಗಣಿಸಲ್ಪಡುತ್ತದೆ. ಅಭ್ಯರ್ಥಿಯ **OPTIONS** ಲಿಸ್ಟ್‌ನಲ್ಲಿ ಅಂತಹ ಕಾಲೇಜು ಇದ್ದಲ್ಲಿ ಸೀಟನ್ನು ಹಂಚಿಕೆ ಮಾಡಿಕೊಳ್ಳಲು ಉತ್ತಮ ಅವಕಾಶ ಪಡೆಯಬಹುದು.

e) ಅಭ್ಯರ್ಥಿಗಳು ಆದ್ಯತಾ ಕ್ರಮದಲ್ಲಿ ನಮೂದಿಸುವ ಗಳನ್ನು ಗಣನೆಗೆ ತೆಗೆದುಕೊಂಡು ಸೀಟು ಹಂಚಿಕೆಯನ್ನು ಮಾಡುವುದರಿಂದ, ಸೀಟು ಹಂಚಿಕೆಯ ನಂತರ ತಮಗೆ ಗೊತ್ತಿರಲಿಲ್ಲ ಎಂದು ಕಾರಣ ನೀಡಬಾರದು ಮತ್ತು ಹಂಚಿಕೆಯಾದ ಸೀಟನ್ನು ನಿರಾಕರಿಸಬಾರದು.

f) ಶುಲ್ಕದ ವಿನ್ಯಾಸಗಳನ್ನು ತಿಳಿದುಕೊಂಡು ನಂತರ **OPTIONS** ಗಳನ್ನು ದಾಖಲಿಸಿ ಎಂದು ಪ್ರತಿ ಸುತ್ತಿನಲ್ಲಿ ಸಾಕಷ್ಟು ಬಾರಿ ಅಭ್ಯರ್ಥಿಗಳಿಗೆ ಮಾಹಿತಿ ನೀಡಲಾಗುತ್ತಿದೆ. ಆದರೂ ಸಹ ಸೀಟು ಹಂಚಿಕೆಯ ನಂತರ ಶುಲ್ಕದ ವಿವರಗಳು ನಮಗೆ ತಿಳಿದಿಲ್ಲ ಎಂದು ಕೆಲವು ಪೋಷಕರು ಸೀಟು ಬೇಡ ಎಂದು ಪ್ರಾಧಿಕಾರದಲ್ಲಿ ಸೀಟು ರದ್ದುಗೊಳಿಸಲು ಕೋರುತ್ತಿರುವುದು ಕಂಡು ಬಂದಿದೆ.

g) ಆದ್ದರಿಂದ **ಅಭ್ಯರ್ಥಿಗಳು ಪ್ರಮುಖವಾಗಿ ಶುಲ್ಕವನ್ನು** ಗಮನಿಸಿ ನಂತರ **ಕಾಲೇಜು – ಕೋರ್ಸಿಗೆ ಸೇರ ಬಯಸಲು ಆಸಕ್ತಿ ಇರುವ ಆಪ್ಷನ್ಸ್** ಗಳನ್ನು **ಮಾತ್ರ ಆದ್ಯತಾ ಕ್ರಮದಲ್ಲಿ ದಾಖಲಿಸಲು ಸೂಚಿಸಿದೆ.**

h) ಅಭ್ಯರ್ಥಿಯು, ತನಗೆ ಹಂಚಿಕೆಯಾಗಿರುವ ಕಾಲೇಜು / ಕೋರ್ಸ್ ಬೇಡ ಅಥವಾ **ಸೇರಿಕೊಂಡ ನಂತರ ಆ ಕಾಲೇಜನ್ನು ಬಿಟ್ಟುಬಿಟ್ಟರೆ, ಸಾಮಾಜಿಕ ಹೊಣೆಗಾರಿಕೆಯ** ನಿರ್ವಹಣೆಯಲ್ಲಿ ಎಸಗಿದ ಗುರುತರವಾದ **ಲೋಪ ಎಂದು ಪರಿಗಣಿಸಲಾಗುವುದು.** ಇತರೆ ಅಭ್ಯರ್ಥಿಗಳು ಸರದಿಯಲ್ಲಿ ಸೀಟು **ಹಂಚಿಕೆಗಾಗಿ** ಕಾಯುತ್ತಿದ್ದಾರೆ ಎಂಬುದನ್ನು ಗಮನಿಸಿ.

i) **3RD ROUND** ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಅಭ್ಯರ್ಥಿಗಳು ಸೀಟುಗಳ ಲಭ್ಯತೆಯನ್ನು ನೋಡಿ ಹಾಗು ವಿವಿಧ ವರ್ಗಗಳಲ್ಲಿನ ಸೀಟುಗಳ ಶುಲ್ಕವನ್ನೂ ಸಹ ತಿಳಿದುಕೊಂಡು ಭಾಗವಹಿಸಬಹುದಾಗಿದೆ.

j) **ಶುಲ್ಕದ ವಿವರಗಳನ್ನು ಕಡ್ಡಾಯವಾಗಿ ತಿಳಿದುಕೊಂಡು ಪೋಷಕರೊಡನೆ ನಿರ್ಧರಿಸಿ ನಂತರ ಈ ಸುತ್ತಿನಲ್ಲಿ ಭಾಗವಹಿಸಲು ಮತ್ತೊಮ್ಮೆ ಸೂಚಿಸಿದೆ.**

**5. ಕಾಲೇಜಿಗೆ ವರದಿ ಮಾಡಿಕೊಂಡು ಈ ಸುತ್ತಿನಲ್ಲಿ ಭಾಗವಹಿಸುತ್ತಿರುವ ಅಭ್ಯರ್ಥಿಗಳಿಗೆ ಸೂಚನೆಗಳು**

a) ಈ ಸುತ್ತಿನಲ್ಲಿ ಭಾಗವಹಿಸುತ್ತಿರುವ ಅಭ್ಯರ್ಥಿಗಳು ತಮಗೆ ಹಿಂದಿನ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮ ಸೀಟನ್ನು ಪಡೆಯುವುದಕ್ಕಾಗಿ (up-gradation) ಭಾಗವಹಿಸುತ್ತಿದ್ದೇನೆ ಎಂದು ಅರ್ಥೈಸಿಕೊಳ್ಳುವುದು. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ತಕ್ಷಣ ಹಿಂದಿನ ಸುತ್ತಿನಲ್ಲಿ ಹಂಚಿಕೆಯಾದ ಸೀಟು ತಂತಾನೆ ರದ್ದುಗೊಳ್ಳುತ್ತದೆ ಹಾಗೂ ಅಂತಹ ಸೀಟನ್ನು ಮತ್ತೆ ಪಡೆಯಲು ಸಾಧ್ಯವಿರುವುದಿಲ್ಲ; ಹಾಗೂ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯುವುದು ಕಡ್ಡಾಯವಾಗಿರುತ್ತದೆ.

b) ಯಾವುದೇ ಕಾರಣಕ್ಕೂ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾದ ಕಾಲೇಜುಗಳಲ್ಲಿ ಮುಂದುವರಿಯಲು ಸಾಧ್ಯವಿರುವುದಿಲ್ಲ. ಈಗಾಗಲೆ ತಿಳಿಸಿದಂತೆ ಹಿಂದಿನ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಅವರ ಹೆಸರಿನಲ್ಲಿ ಇರುವುದಿಲ್ಲ, ಅಭ್ಯರ್ಥಿಗಳು ಕಡ್ಡಾಯವಾಗಿ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಬೇಕು. **ಹಿಂದಿನ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ಮರಳಿ ಪಡೆಯಲು ಯಾವುದೇ ಅವಕಾಶ ಇರುವುದಿಲ್ಲ.**

c) ಒಂದು ವೇಳೆ ಅಭ್ಯರ್ಥಿಗೆ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ, ಹಿಂದಿನ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಖಚಿತವಾಗುತ್ತದೆ.

6. ಮೂರನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಕುರಿತು

a) ಅಭ್ಯರ್ಥಿಗಳು ಆದ್ಯತಾ ಕ್ರಮದಲ್ಲಿ ದಾಖಲಿಸಿದ ಆಪ್ಷನ್‌ಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ನಿಯಮಾನುಸಾರ ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸುಗಳ 3ನೇ ಸುತ್ತಿನ ಸೀಟು ಹಂಚಿಕೆಯನ್ನು ನಡೆಸಿ ತಾತ್ಕಾಲಿಕ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

b) ಅಖಿಲ ಭಾರತ ಕೋಟದ 3ನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಪ್ರಾಧಿಕಾರದ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಪ್ರಕಟಿಸಲಾಗುವುದು.

c) ಅಖಿಲ ಭಾರತ ಕೋಟದ 3ನೇ ಸುತ್ತಿನಲ್ಲಿ ಹಂಚಿಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ನಂತರ ಪ್ರಾಧಿಕಾರದ 3ನೇ ಸುತ್ತಿನಲ್ಲೂ ಸೀಟು ಹಂಚಿಕೆ ಮಾಡಿಕೊಂಡು ಪ್ರಾಧಿಕಾರದ ಸೀಟನ್ನೇ ಉಳಿಸಿಕೊಳ್ಳಲು ಬಯಸಿದಲ್ಲಿ, ಖುದ್ದಾಗಿ ಪ್ರಾಧಿಕಾರಕ್ಕೆ ಲಿಖಿತವಾಗಿ ಮನವಿಯನ್ನು ಸಲ್ಲಿಸಿದಲ್ಲಿ ಮಾತ್ರ ಪ್ರಾಧಿಕಾರದಿಂದ ಹಂಚಿಕೆಯಾದ ಸೀಟನ್ನು ಉಳಿಸಿಕೊಳ್ಳಬಹುದು (ತಾತ್ಕಾಲಿಕ ಫಲಿತಾಂಶವನ್ನು ಪ್ರಕಟಿಸಿದ ಒಂದು ದಿನದೊಳಗಾಗಿ);

d) ಇಲ್ಲದಿದ್ದಲ್ಲಿ ಪ್ರಾಧಿಕಾರದ ಮೂರನೆ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಿದ್ದರೂ ಸಹ ಅಂತಹ ಅಭ್ಯರ್ಥಿಗಳನ್ನು ಪ್ರಾಧಿಕಾರದ ಮೂರನೆ ಸುತ್ತಿನ ಅಂತಿಮ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ ಮತ್ತು ಪಾವತಿಸಿದ್ದ CAUTION DEPOSIT ಹಿಂದಿರುಗುಸುವುದಿಲ್ಲ.

7. ಈ ಕೆಳಗಿನ ಸೂಚನೆಗಳನ್ನು ತಪ್ಪದೇ ಓದಿ

a) ಈಗಾಗಲೇ ಇಂಜನಿಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ ಮತ್ತು ಇತರೆ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ವೈದ್ಯಕೀಯ / ದಂತವೈದ್ಯಕೀಯ ಸೀಟುಗಳಲ್ಲಿ ಆಸಕ್ತಿ ಇದ್ದರೆ ಮಾತ್ರ ಮತ್ತು ನಿಗದಿತ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ತಾವು ಅಭ್ಯಸಿಸುತ್ತಿರುವ ಕಾಲೇಜುಗಳಿಂದ ಪಡೆಯುವುದನ್ನು ಖಾತ್ರಿಪಡಿಸಿಕೊಂಡು ಈ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ.

b) ಪ್ರವೇಶ ಪಡೆದಿರುವ ಕಾಲೇಜುಗಳಿಂದ ಮೂಲ ದಾಖಲೆಗಳನ್ನು ಪಡೆದು ಹೊಸದಾಗಿ ಹಂಚಿಕೆಯಾಗುವ ಕಾಲೇಜುಗಳಿಗೆ ನಿಗದಿತ ಸಮಯದಲ್ಲಿ ನೀಡಿ ಪ್ರವೇಶ ಪಡೆಯುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

c) ಒಂದು ವೇಳೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯದಿದ್ದಲ್ಲಿ ಅಭ್ಯರ್ಥಿಯು ಎರಡೂ ಕಡೆ ಸೀಟು ಕಳೆದು ಕೊಳ್ಳುತ್ತಾನೆ ಯಾವುದೇ ಸೀಟನ್ನು ಹೊಂದಿರುವುದಿಲ್ಲ ಹಾಗು ಯಾವುದೇ ಶುಲ್ಕವನ್ನು ಮರು ಪಾವತಿ ಮಾಡುವುದಿಲ್ಲ.

8. ಮೂರನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಣೆಯ ನಂತರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು

ಮೂರನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶದಲ್ಲಿ ಸೀಟು ಹಂಚಿಕೆ ಮಾಡಿಕೊಳ್ಳುವ ಅಭ್ಯರ್ಥಿಗಳು, ಪ್ರಕಟಿಸಲಾಗುವ ವೇಳಾಪಟ್ಟಿಯಂತೆ ತಪ್ಪದೇ ಶುಲ್ಕವನ್ನು ಪಾವತಿಸಬೇಕು (ಪಾವತಿಸದೇ ಇದ್ದಲ್ಲಿ ಅಥವಾ CAUTION DEPOSIT ಕಡಿತಗೊಳಿಸಿ) ಹಾಗೂ ನಿಗದಿತ ದಿನಾಂಕದೊಳಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಂಚಿಕೆಯಾದ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶವನ್ನು ಪಡೆಯಬೇಕು; ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ಬದ್ಧ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು